* * *

ಕೆಂಪಮ್ಮನ ಒತ್ತಡಕ್ಕೆ ನರ್ಸಮ್ಮ ಇಲ್ಲವೆನ್ನಲಾಗಲಿಲ್ಲ. ವನಜಾಕ್ಷಿಯನ್ನು ದೊಡ್ಡಾಸ್ಪತ್ರೆ ಸರ್ಜನ್‌ಗೆ ತೋರಿಸಿದಳು. ಡಾಕ್ಟರ್ ನೀಡಿದ ಸಲಹೆಯಂತೆ ರಾಜಶೇಖರನನ್ನು ಕರೆತಂದಳು. ಅವನಿಗೂ ಎಲ್ಲಾ ರೀತಿಯ ಟೆಸ್ಟು ನರ್ಸಮ್ಮನ ನೇತೃತ್ವದಲ್ಲೇ ಮಾಡಿಸಲಾಯಿತು. ಟೆಸ್ಟ್‌ಗಳು ಮುಗಿದ ಮೇಲೆ ಅದರ ಫಲಿತಾಂಶಕ್ಕಾಗಿ ಡಾಕ್ಟರನ್ನು ಕಂಡಳು. ಈ ದಂಪತಿ ಮುಂದೇನು ಮಾಡಬೇಕೆಂದು ಕೇಳಿಕೊಂಡಳು. ಡಾಕ್ಟರ್ ನರ್ಸಮ್ಮನಿಗೆ ಹೇಳಿದಂತೆ ವನಜಾಕ್ಷಿಯನ್ನು ಮೂಲೆಗೆ ಕರೆದುಕೊಂಡು ಹೋದಳು. ಅಲ್ಲಿ ಅವಳ ಕಿವಿಯಲ್ಲಿ ಏನೇನೋ ಉರುಬಿದಳು. ನರ್ಸಮ್ಮನ ಮಾತಿನಲ್ಲಿ ಹಿತವಿದೆ ಎಂದು ಭಾವಿಸಿದ ವನಜಾಕ್ಷಿ ಒಂದಷ್ಟು ಹೊತ್ತು ಹಿಂಗೂ ಉಂಟಾ! ಗೋಣು ಮುರಿದಳು.

ಆದರೆ, ಇದು ನಿಮ್ಮಂಥ ಹಳ್ಳಿಗಾಡಿನ ಜನರಿಗೆ ಗೊತ್ತಿಲ್ಲ. ನಾನು ಹೇಳಿದಂತೆ ಮಾಡಿದರೆ ನಿನಗೆ ಮಕ್ಕಳಾಗುತ್ತವೆ ಎಂದು ವನಜಾಕ್ಷಿಯನ್ನು ನರ್ಸಮ್ಮ 'ನೀನೂ ಚೌಳುಮಣ್ಣಿನ ಹೊಲದಂತೆ, ಎಷ್ಟು ನೀರು ಹೊಯ್ದರೂ ನೀರು ನಿಲ್ಲುಕ್ಕಿಲ್ಲ, ಒಳ್ಳೆಬೆಳೆಯೂ ಬರುಕಿಲ್ಲ' ಎಂದು ಸೂಚ್ಯವಾಗಿ ಹೋಲಿಕೆ ಮಾಡಿದಳು. ಅವಳ ಮುಂದಿನ ಯಾವ ಮಾತಿಗೂ ತಿರಸ್ಕಾರದ ಉತ್ತರ ನೀಡಲಾಗದೇ 'ಏನಾದ್ರೂ ಮಾಡು, ಕಂದನಾ ಕೊಡು ಶಿವನೇ' ಒಪ್ಪಿಕೊಂಡಳು.

* * *

ನರ್ಸಮ್ಮನೊಂದಿಗೆ ವನಜಾಕ್ಷಿ ಹೆಜ್ಜೆಗಳು ಸಾಗಿದವು. ಇತ್ತ ರೈತರೊಂದಿಗೆ ರಾಜಶೇಖರ 'ಬರ ಪರಿಹಾರದ ಹೆಚ್ಚಳಕ್ಕಾಗಿ, ಬಿತ್ತಿದ ಬೀಜ ಬಾರದೆ ನಷ್ಟವಾಗಿದ್ದಕ್ಕೂ ಈಗಲೇ ಪರಿಹಾರ ಕೊಡಬೇಕೆಂದು ಪ್ರತಿಭಟನಕಾರರ ಸಾಲಿನಲ್ಲಿ ಸಾಗಿದನು. ನರ್ಸಮ್ಮನೊಂದಿಗೆ ಹೊರಟ ವನಜಾಕ್ಷಿ ಬೆಂಗಳೂರಿನಂಥ ದೊಡ್ಡ ಪಟ್ಟಣಕ್ಕೆ ಕಾಲಿಟ್ಟಳು. ಅವಳ ಮೈಮನವೆಲ್ಲ ರೋಮಾಂಚನಗೊಂಡಿತು. ಇಂಥ ನೆಲದಲ್ಲಿ ತನ್ನ ಅಸ್ತಿತ್ವವಾದರೂ ಏನೂ ಎಂದು ಪ್ರಶ್ನಿಸಿಕೊಳ್ಳುವಂತೆ ಮಾಡಿತು. ತನ್ನ ಗಂಡ ಮತ್ತು ರೈತರ ಹೋರಾಟವೂ ತನ್ನಂತೆಯೇ ಎಂದು ಎಂದು ಹೋಲಿಕೆ ಮಾಡಿಕೊಂಡಳು. ಮುಂದೆ ಯಾವ ಸಂದರ್ಭ ಎದುರಾಗಬಹುದೋ? ಮುಂದಿನ ಹಾದಿಯ ನಿರೀಕ್ಷೆಯಲ್ಲಿ ನರ್ಸಮ್ಮನ ಬಿರುಸಾದ ಹೆಜ್ಜೆ ಹಾಕುತ್ತಲೇ ಹೋದಳು.

ಡಾಕ್ಟರ್ ನೀಡಿದ ಸಲಹೆಯಂತೆ ನರ್ಸಮ್ಮ ಯಾವಯಾವುದೋ ಅಧಿಕಾರಿಗಳು, ವ್ಯಕ್ತಿಗಳನ್ನು ತನಗೆ ಗೊತ್ತಿರುವ ಭಾಷೆಯಲ್ಲಿ ಕೇಳಿದಳು. ಅವರು ತೋರಿದ ಹಾದಿಯಲ್ಲಿ ಮುಂದೆ ನಡೆದಳು. ಒಂದು ದೊಡ್ಡ ವಿಚಿತ್ರ ವೇಷ ಧರಿಸಿದಂತೆ ಕಂಡ ಕಟ್ಟಡದಲ್ಲಿನ ಒಳಗಿರುವ ಶೈತ್ಯಾಗಾರಕ್ಕೆ ಕರೆದುಕೊಂಡು ಹೋದಳು.

ವನಜಾಕ್ಷಿ ಶೈತ್ಯಾಗಾರದ ಕುಳುಕುಳು ಚಳಿಗೆ ನಡುಗಿದಳು. ನರ್ಸಮ್ಮನಿಗೆ ಇದೆಲ್ಲ ಮಾಮೂಲಾಗಿದ್ದರಿಂದ 'ನಡುಕ ಯಾಕೆ ವನಜಾಕ್ಷಿ, ನಿನ್ನ ವನವೆಲ್ಲ ಈಗ ಹಸಿರಾಗುವ ಕಾಲ ಬಂದಿದೆ' ಗೇಲಿ ಮಾಡಿದಳು. ನರ್ಸಮ್ಮನ ಹಿಂದೆ ಹೋದಂತೆ ಒಂದೊಂದು ಬಾಟಲಿಗೆ ಅಂಟಿಸಿದ್ದ ಮಕ್ಕಳ ಚಿತ್ರ. ಇಂಥ ಮಕ್ಕಳು ಬೇಕೆಂದರೆ, ಇಂಥ ಸೀಸೆ ಎಂದು ಗುರುತು ಮಾಡು' ಸಲಹೆ ನೀಡಿದಳು.

ವನಜಾಕ್ಷಿ ಒಂದೊಂದು ಬಾಟಲಿಗೆ ಅಂಟಿಸಿದ್ದ ಗಟ್ಟಿಮುಟ್ಟಾದ ವ್ಯಕ್ತಿಗಳ ಚಿತ್ರ, ಅವರ ಮುಖ ಚಹರೆ ಹೋಲುವ ಮಕ್ಕಳ ಚಿತ್ರ ಇವುಗಳನ್ನು ಕಂಡು ತಬ್ಬಿಬ್ಬಾದಳು. ಈ ಸೀಸೆಯಲ್ಲಿ ಏನಿದೆ ಎಂದು ನರ್ಸಮ್ಮನನ್ನು ಪ್ರಶ್ನಿಸಬೇಕೆಂದುಕೊಂಡಳು. ನರ್ಸಮ್ಮ ವನಜಾಕ್ಷಿಯ ಪ್ರಶ್ನಾರ್ಥಕ ಮುಖಭಾವ ಗುರುತಿಸಿ 'ನೋಡು ಈ ವ್ಯಕ್ತಿ ತುಂಬಾ ಗಟ್ಟಿಮುಟ್ಟಾಗಿದ್ದಾನೆ. ಇವನ ವೀರ್ಯವನ್ನು ನಿನಗೆ ಜೋಡಿಸಿ, ಕಸಿ ಮಾಡಿದರೆ ಇಂಥ ಗಟ್ಟಿಮುಟ್ಟಾದ, ಆರೋಗ್ಯವಂತ ಮಗು ಹುಟ್ಟುತ್ತದೆ' ಎಂದು ತೋರಿಸಿದಳು.

* * *

ವನಜಾಕ್ಷಿ ನರ್ಸಮ್ಮನ ಮಾತು ಕೇಳಿ ತನ್ನೊಡಲಿಗೆ ಪರಿಚಿತವಲ್ಲದ ಬೀಜ ಕಸಿ ಮಾಡುವ, ಮಲಿನ ಮಾಡುವ ಹುನ್ನಾರ ಅರಿತಂತೆ ಕಂಡಳು. 'ಇದೂ ನಂಗೆ ನಾಚ್ಕೆ ಆಯ್ತದೆಕವ್ವ, ಸಿಡಿಲಿನಂತೆ ಗುಡುಗುವ ಗಂಡ, ಗೂಳಿಯಂತೆ ಗುಟುರು ಹಾಕುವ ನಮ್ಮೂರ ಹೈಕಳಲ್ಲಿ ಇಲ್ಲದ್ದು ಈ ಸೀಸೆಯಲ್ಲಿ ಏನಿದೆ? ಇದೂ ನನಗೆ ಬೇಡ, ನಾನೂ ನಮ್ಮೂರಿಗೆ ಹೋಯ್ತೀನಿ, ನಾವಲ್ಲೆ' ಎಂದು ಪಟ್ಟು ಹಿಡಿದಳು.

●